# ಬಣ್ಣದ ಗಾರುಡಿಗನ ಚುಕ್ಕಿಚಿತ್ರ ಚಮತ್ಕಾರ

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿರುವ ಚಿತ್ರಕಲಾ ಶಿಕ್ಷಕ ಸುನೀಲ ಚಿತ್ರಗಾರ ಅವರ ಕುಂಚದಲ್ಲಿ ಪಡಿಮೂಡುವ ವ್ಯಕ್ತಿಚಿತ್ರ, ಚುಕ್ಕಿಚಿತ್ರಗಳು ಮನಮೋಹಕವಾಗಿವೆ. ಖ್ಯಾತನಾಮರ ಚಿತ್ರಗಳನ್ನು ಯಥಾವತ್ ಆಗಿ ಚಿತ್ರಿಸುವ ಇವರ ಕೈಚಳಕ ಎಂಥವರನ್ನಾದರೂ ಮರುಳು ಮಾಡುವಂತಿವೆ.

■ ಪ್ರಕಾಶ ಎಸ್. ಮನ್ನಂಗಿ



ಇವರು ಕುಂಚ ಹಿಡಿದು ಕುಳಿತರೆ ಕ್ಯಾನ್ವಾಸ್ ಮೇಲೆ ಬಣ್ಣ ಬಣ್ಣದ ಚಿತ್ತಾರಗಳು ಮೂಡುತ್ತವೆ. ಇವರಿಗೆ ತೈಲವರ್ಣ, ಜಲವರ್ಣದೊಡನೆ ಆಟವಾಡುವುದೆಂದರೆ ಚೆನ್ನಾಟ! ಚುಕ್ಕಿ ಚಿತ್ರ ಬಿಡಿಸಿದರೆ ನೋಡಿದವರು ಸೈ ಎನ್ನಬೇಕು. ವ್ಯಂಗ್ಯ ಚಿತ್ರದಲ್ಲೂ ಕೈಯಾಡಿಸಿದ್ದಾರೆ. ಹಲವಾರು ಗಣ್ಯರ ವ್ಯಕ್ತಿಚಿತ್ರ ಬಿಡಿಸಿದ್ದಾರೆ. ಇವರು ಯಾರು ಅಂತೀರಾ?

ಹಾವೇರಿ ಜಿಲ್ಲೆ ಹಿರೇಕೆರೂರು ತಾಲೂಕು ಕಚವಿಯ ಸರ್ದಾರ್ ವೀರನಗೌಡ ಪಾಟೀಲ ಸರಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರು. ಸದಾ ಮಕ್ಕಳೊಂದಿಗೆ ಪಾದರಸದಂತೆ ಚುರುಕಾಗಿ ಸುತ್ತುತ್ತ ಅವರಲ್ಲಿ ಸೃಜನಾತ್ಮಕ, ಭಾವನಾತ್ಮಕ ಮನೋಭಾವ ಮೂಡಿಸಿದ ಗಾರುಡಿಗ. ಇವರೇ ಸುನೀಲ ಚಿತ್ರಗಾರ.

ಇವರು ಚಿತ್ರಗಾರ ಮನೆತನದವರು. ಕುಟುಂಬದಲ್ಲಿ ಚಿತ್ರಕಲೆ ತಲ ತಲಾಂತರದಿಂದ ಬಂದುದು. ಹೀಗಾಗಿ ಸುನೀಲರು ಸ್ವಾಭಾವಿಕವಾಗಿ ಚಿತ್ರಕಲೆಯತ್ತ ವಾಲಿದರು. ವೃತ್ತಿ ಚಿತ್ರಕಲಾ ಶಿಕ್ಷಕ, ಪ್ರವೃತ್ತಿಯೂ ಚಿತ್ರಕಲೆಯೇ. ಸಾಧನೆಯ ಹಾದಿಯಲ್ಲಿ ಅಪ್ರತಿಮ ಸಾಧಕರು.

ಇಂದಿನ ರಾಷ್ಟ್ರಪತಿಗಳಾದ ರಾಮನಾಥ ಕೋವಿಂದ್, ಮಾಜಿ ಪ್ರಧಾನಿ ವಾಜಪೇಯಿ, ಮನಮೋಹನ ಸಿಂಗ್, ಕನ್ನಡದ ಕಣ್ಮಣಿ ರಾಜಕುಮಾರ್ ಮತ್ತು ಜ್ಞಾನಪೀಠ ಪ್ರಶಸ್ತಿ ವಿಜೇತರ ಚುಕ್ಕಿ ಚಿತ್ರಗಳು ಮನಮುಟ್ಟುವಂತಿವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಮತ್ತು ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದವರ ಚುಕ್ಕಿ ಚಿತ್ರಗಳು ಇವರ ಹಿರಿಮೆಗೊಂದು ಗರಿ ಮೂಡಿಸಿವೆ. ಮೈಸೂರು ದಸರಾದಲ್ಲಿ ಮತ್ತು ಜಿಲ್ಲಾ ಉತ್ಸವಗಳಲ್ಲಿ ಚಿತ್ರಕಲಾ ಪ್ರದರ್ಶನ ಏರ್ಪಡಿಸಿದ್ದಾರೆ.

ರಾಜ್ಯಮಟ್ಟದ ಪರಿಸರ ಸಂರಕ್ಷಣೆ ಕುರಿತ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಪರಿಸರ ಜಾಗೃತಿ, ಸ್ವಚ್ಛತಾ ಆಂದೋಲನಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕುರಿತ ಹಲವಾರು ಚಿತ್ರಗಳು ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಿಜಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

1987 ರಲ್ಲಿ ರಾಷ್ಟ್ರಪತಿಗಳಾಗಿದ್ದ ಗ್ಯಾನಿ ಜೇಲ್‌ಸಿಂಗ್ ಮತ್ತು ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರ ಚುಕ್ಕಿಚಿತ್ರ ಬಿಡಿಸಿ ಅವರಿಗೆ ಅರ್ಪಿಸಿ ಮೆಚ್ಚುಗೆ ಗಳಿಸಿದ್ದರು. ನಡೆದಾಡುವ ದೇವರು ತುಮಕೂರಿನ ಶಿವಕುಮಾರ ಸ್ವಾಮೀಜಿ ಹಾಗೂ ಇನ್ನೂ ಹಲವಾರು ಸ್ವಾಮೀಜಿಗಳ ಚುಕ್ಕಿಚಿತ್ರ ಬಿಡಿಸಿರುವರು. ಕಾದಂಬರಿಕಾರ ಎಸ್. ಎಲ್.ಭೈರಪ್ಪ ಮತ್ತು ಸಾಹಿತಿ ಚಂಪಾರವರ ಚುಕ್ಕಿಚಿತ್ರಗಳನ್ನು ಅವರಿಗೆ ಅರ್ಪಿಸಿದ್ದಾರೆ. ಮಹದೇವ ಬಣಕಾರರ ಚುಕ್ಕಿಚಿತ್ರಗಳೂ ಬೆಳಕು ಕಂಡಿವೆ.